# ಗೀತೆ ಕಟ್ಟಿಕೊಡುವ ಶ್ರೇಷ್ಠ ಜೀವನ

ಡಾ. ಸಿ.ಪಿ. ಕೃಷ್ಣಕುಮಾರ್

ಗೀತೆ ಎಲ್ಲರಿಗಾಗಿ ಇರುವ ಗ್ರಂಥ. ಅರ್ಜುನನನ್ನು ನೆಪವಾಗಿಟ್ಟುಕೊಂಡು ಮನುಕುಲಕ್ಕೆ ಬದುಕುವ ದಾರಿಯನ್ನು ತೋರಿಕೊಡುವ ಈ ಗ್ರಂಥವು ಆದರ್ಶ ಬದುಕಿನ ಹತ್ತುಹಲವು ಮಾರ್ಗಗಳನ್ನು ತೋರಿಸಿಕೊಡುತ್ತದೆ. ಈ ಕುರಿತು ವಿವರಿಸಿರುವ ಲೇಖಕರು ಕನ್ನಡದ ಸುಪ್ರಸಿದ್ಧ ಬರಹಗಾರರು. ಮುನ್ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಂಥಗಳನ್ನು ರಚಿಸಿ ಪ್ರಕಟಿಸಿರುವ ಅವರು ಮೈಸೂರು ಆಶ್ರಮದ ಭಕ್ತರೂ ಆಗಿದ್ದಾರೆ.

'ಗೀತೋಪನಿಷತ್ತು' ಎನಿಸಿದ ಶ್ರೀಮದ್ಭಗವದ್ಗೀತೆ ದ್ವೈಪಾಯನ ಪ್ರಣೀತವಾದ 'ಮಾರ್ಗದರ್ಶಕ ಮಂತ್ರದೀಪಿಕೆ'; ಶ್ರೇಷ್ಠವೂ ಸ್ವಸ್ಥವೂ ಸ್ವಚ್ಛವೂ ಆದ ಜೀವನದ ನಿರ್ಮಲ ನಿರ್ಮಾತೃ; ಬದುಕಿನ ಮೌಲ್ಯಗಳ ತವನಿಧಿ, ಸುಧಾಂಬುಧಿ; ಆದರ್ಶಗಳ ಸ್ವರೂಪವನ್ನು ಅನನ್ಯವಾಗಿ ನಿರೂಪಿಸುವ 'ಜಗದ್ಗುರು', ಗ್ರಂಥ; ಕುರುಕ್ಷೇತ್ರ-ಧರ್ಮಕ್ಷೇತ್ರಗಳ ಮಂಗಳ ಸಂಗಮದಲ್ಲಿ ಸಂಬಂಧಿಸಿದ ಭುವನವಂದ್ಯ ಕೃತಿವಿಭೂತಿ!

ಗೀತೆಯನ್ನು ಗೀತಾಧ್ಯಾನ ಶ್ಲೋಕವೊಂದು 'ಭವದ್ವೇಷಿಣಿ' ಎಂದು ಕರೆದಿರುವುದು ಅಸಾಧುವೆನ್ನಬೇಕು. 'ಭವದ್ವೇಷಿಣಿ' ಏಕಾಗಬೇಕು, ಭಗವದ್ಗೀತೆ? (ರಾಗದ್ವೇಷನಿರಸನವೆ ಅದರ ಗುರಿ). ದಿಟವಾಗಿ ಅದು ಭವೋಪಯೋಗಿನಿ; ಒಟ್ಟಿನಲ್ಲಿ ಬಹೂಪಯೋಗಿನಿ. ಭಕ್ತರಿಗೆ ಹೇಗೋ ಹಾಗೆ ಭವಿಗಳಿಗೂ ಅದು ಉಪಾದೇಯ; ಆಸ್ತಿಕರಿಗೆ ಹೇಗೋ ಹಾಗೆ ನಾಸ್ತಿಕರಿಗೂ ಉಪಯುಕ್ತ; ಯೋಗಿಗಳಂತೆ ಗೃಹಸ್ಥರೂ ಸಂನ್ಯಾಸಿಗಳಂತೆ ಸಂಸಾರಿಗಳೂ ಪಂಡಿತರಂತೆ ಪಾಮರರೂ ಅದರ ಪ್ರಯೋಜನ ಪಡೆಯಬಹುದು. ಅದು ಅರ್ವಾಚೀನಯುಗಕ್ಕೂ ಪ್ರಸ್ತುತ; ಅದರ ಸಂದೇಶ ಜಾಗತಿಕ.

ಗೀತೆಯನ್ನು 'ಮೋಕ್ಷ ಶಾಸ್ತ್ರ' ಎನ್ನಲಾಗಿದೆ. ಇರಬಹುದು. ಆದರೆ ಅದರಲ್ಲಿ ತ್ರಿವರ್ಗಗಳ ಪ್ರತಿಪಾದನೆಯೂ ಇರುವುದು ಮುಖ್ಯ. ಜ್ಞಾನಿ, ಜಿಜ್ಞಾಸುಗಳಿಗೆ ಎಂತೋ ಅಂತೆ ಆರ್ತ, ಅರ್ಥಾರ್ಥಿಗಳಿಗೂ ಅದು ಉದ್ದಿಷ್ಟ. ಅದು ನೀಡಬಯಸುವುದು ಸತ್ತ ಮೇಲಿನ ಮೋಕ್ಷವನ್ನಲ್ಲ; ಬದುಕಿರುವಾಗಲೆ ಮೋಕ್ಷವನ್ನು; ವಿವಿಧ ಉಪಾಧಿಗಳಿಂದ ಬಿಡುಗಡೆಯನ್ನು.

ಎಷ್ಟೋ ಗೀತೋಕ್ತಿಗಳನ್ನು ತಾತ್ತ್ವಿಕವಾಗಿ ಮಾತ್ರವಲ್ಲ, ವ್ಯಾವಹಾರಿಕವಾಗಿಯೂ ಅರ್ಥೈಸಬಹುದು, ಅರ್ಥೈಸಬೇಕು. ಹೀಗಾಗಿ ತಾತ್ತ್ವಿಕ, ವ್ಯಾವಹಾರಿಕ ಎರಡೂ ಸ್ತರಗಳಲ್ಲಿ ಪ್ರವರ್ತಿಸುತ್ತದೆ, ಗೀತಾರ್ಥ. ಅದು ಬರಿಯ ವಾಚನಕ್ಕಾಗಿಯಲ್ಲ; ಧ್ಯಾನಕ್ಕಾಗಿಯಲ್ಲ; ಅನುಷ್ಠಾನಕ್ಕಾಗಿ.

ಕುರುಕ್ಷೇತ್ರದಲ್ಲಿ, ಮಹಾಭಾರತ ಮಧ್ಯದಲ್ಲಿ, ಉಭಯ ಸೇನೆಗಳ ನಡುವೆ, ಶಂಖಭೇರಿಗಳ ಮೊಳಗಿನ ಸಾಹಚರ್ಯದಲ್ಲಿ ಹುಟ್ಟಿದ್ದು ಗೀತೆ; ಯಾವುದೋ ವಿವಿಕ್ತ ಸ್ಥಾನದಲ್ಲಲ್ಲ. ಕುರುಕ್ಷೇತ್ರ ಅಥವಾ ಮಹಾಭಾರತ ಜೀವನರಂಗವನ್ನು, ಜೀವನಸಂಗ್ರಾಮವನ್ನು ಸಂಕೇತಿಸುತ್ತದೆ. ಅಲ್ಲಿ ಅರ್ಜುನ 'ನಿಮಿತ್ತಮಾತ್ರ'. ಅವನ ಮೂಲಕ ಸಕಲಜೀವರ ಬಳಿಗಿಳಿದು ಬರುತ್ತದೆ, ಗೀತೆಯ ಸಂದೇಶಾಮೃತ; ಭರವಸೆಯ ಸಾಂತ್ವನವಾಣಿ.



ಅರ್ಜುನನಿಗೆ ಉಂಟಾದ ಅವಸ್ಥೆ ಬದುಕಿನಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಸಲ ಪ್ರಾಪ್ತವಾಗುತ್ತದೆ. ಆಗ ಅದನ್ನು ತೊಲಗಿಸಬಲ್ಲದು, ಗೀತೋಪದೇಶ. ದಿಙ್ಮೂಢ ಕಿಂಕರ್ತವ್ಯಸ್ಥಿತಿಯಲ್ಲಿ ಅದು ಸಮುಚಿತ ಕರ್ತವ್ಯಕ್ಕೆ ಕರೆ ಕೊಡುತ್ತದೆ; ಕವಿದ ಕತ್ತಲೆಯನ್ನು ಪರಿಹರಿಸಿ, ಚೇತನಕ್ಕೆ ಬೆಳಕು ಹರಿಸುತ್ತದೆ; 'ಕ್ಷುದ್ರ ಹೃದಯದೌರ್ಬಲ್ಯ'ಕ್ಕೆ ಕುಠಾರಪ್ರಾಯವಾಗುತ್ತದೆ.

ಗೀತಾಬೋಧನೆಗೆ ಮುನ್ನ ಅರ್ಜುನನ ಅವಸ್ಥೆಯಾದರೂ ಎಂಥದು? ಅದನ್ನು ಗೀತೆ 'ಕಶ್ಮಲ' ಎಂದು ಕರೆದಿದೆ. ಅದು ವಿಷಣ್ಣತೆ; ನಿರುತ್ಸಾಹ, ನಿರ್ವೇದ. ಅದನ್ನು ಆಧುನಿಕ ಪರಿಭಾಷೆಯಲ್ಲಿ depression ಎನ್ನಬಹುದು. ಅದರಿಂದ ವ್ಯಕ್ತಿ ಬೇಗ ಪಾರಾಗದಿದ್ದರೆ, ಪ್ರಾಣಾಪಾಯವೂ ಉಂಟು. (ಅರ್ಜುನನೇ 'ಕಿಂ ಜೀವಿತೇನ ಮೇ'-ಬದುಕಿನಿಂದೇನು- ಎನ್ನುತ್ತಾನೆ). ಗೀತಾವಾಣಿ ಇಂಥ 'ಕಶ್ಮಲ'ವನ್ನು ಹೃದಯದ ಕೊಳೆಯನ್ನು, ಕಳೆಯನ್ನು-ಕಳೆದು ಬಿಸುಡುತ್ತದೆ; ಪಾರ್ಥನನ್ನು ಸ್ವಸ್ಥತೆಗೆ ಮರಳಿಸುತ್ತದೆ.

ಯುದ್ಧದಿಂದ ಯಾರಿಗೂ ಸುಖವಿಲ್ಲ; ಅದು ಮನುಕುಲದ ಮಹಾದುರಂತ; ಜನಸಾಮಾನ್ಯರ ಪಾಲಿಗಂತೂ ಯುದ್ಧ

ವೊಂದು ಹೆಮ್ಮಾರಿ. ಒಂದು ದೃಷ್ಟಿಯಿಂದ ನೋಡಿದರೆ, ಕೃಷ್ಣ ಪಾರ್ಥನನ್ನು ಕಾಳಗಕ್ಕೆ ಪ್ರಚೋದಿಸುತ್ತಾನೆ; ಆದರೆ ಇನ್ನೊಂದು ದೃಷ್ಟಿಯಿಂದ ಅದು ಔಪಚಾರಿಕವಷ್ಟೆ. ವಾಸ್ತವವಾಗಿ ಯುದ್ಧ ವಿರೋಧಿ ನೆಲೆಯಲ್ಲೇ ಭಗವದ್ಗೀತೆಯ ಆವಿರ್ಭಾವ.[೧]

ಕೃಷ್ಣ ಅರ್ಜುನನನ್ನು ಅಕ್ಷರಶಃ ಸಮರಕ್ಕೆ ಪ್ರೇರೇಪಿಸುತ್ತಾನೆ ಎನ್ನುವುದಾದರೆ, ''ಹಿಂದೆಯೆ ಇವರನ್ನೆಲ್ಲ ನಾನು ನೋಡಿದ್ದೇನೆ, ನೀನು ನಿಮಿತ್ತಮಾತ್ರವಾಗಿರು'', ''ಈ ಆತ್ಮನು ಕೊಲ್ಲುವುದೂ ಇಲ್ಲ, ಕೊಲ್ಲಲ್ಪಡುವುದೂ ಇಲ್ಲ'' ಎಂಬ ಮಾತಿಗೆ ಅರ್ಥ ವೇನು? ''ಯುದ್ಧಾಯ ಯುಜ್ಯಸ್ವ''(ಸಮರಕ್ಕೆ ಸನ್ನದ್ಧನಾಗು) ಎನ್ನುವಲ್ಲಿ, ಯುದ್ಧ ಇಂದ್ರಿಯಗಳ ವಿರುದ್ಧ ಏಕಾಗಬಾರದು?

ಕಡೆಯಲ್ಲಿ ಅರ್ಜುನ ಹೇಳುತ್ತಾನೆ: ''ನಿನ್ನ ಅನುಗ್ರಹದಿಂದ ನನ್ನ ಮೋಹ ತೊಲಗಿತು, ಸ್ಮೃತಿ ಉಂಟಾಯಿತು, ಸಂದೇಹ ರಹಿತನಾಗಿರುವೆನು, ನಿನ್ನ ಮಾತನ್ನು ನಡೆಸುತ್ತೇನೆ''. ಇಲ್ಲಿ 'ಯುದ್ಧ ಮಾಡುತ್ತೇನೆ' ಅಥವಾ 'ವೈರಿಗಳನ್ನು ಕೊಲ್ಲುತ್ತೇನೆ' ಎಂಬ ಮಾತಿಲ್ಲದಿರುವುದನ್ನೂ ಲಕ್ಷಿಸಬೇಕು. ಅಲ್ಲದೆ, ಗೀತೆ ಯಲ್ಲಿ ಅಲ್ಲಲ್ಲಿ ಅಹಿಂಸೆಯ ಪ್ರಸ್ತಾಪವಿರುವುದೂ ಗಮನಾರ್ಹ.

ಗೀತೆ ಹೇಳುವ ವಿಷಯಗಳಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ರುವ, ಈ ಹೊತ್ತಿಗೆ ಬಹಳ ಬೇಕಾದುದು, ಕರ್ಮ. 'ಕರ್ಮ ಯೋಗ' ಎಂಬ ತೃತೀಯ ಅಧ್ಯಾಯದಲ್ಲಿ ಮಾತ್ರವಲ್ಲ, ಬೇರೆ ಕಡೆಗಳಲ್ಲೂ ಕರ್ಮದ ಮಹತ್ವವನ್ನು ಮತ್ತೆ ಮತ್ತೆ ಬಿತ್ತರಿಸ ಲಾಗಿದೆ. ''ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ''. (ಇಲ್ಲಿ ಕರ್ಮ ಮಾಡುತ್ತಲೇ ನೂರು ವರ್ಷ ಬದು ಕಿರೋಣ) ಎಂಬ ಉಪನಿಷದ್ವಾಕ್ಯವನ್ನು ಗೀತೋಕ್ತಿಯೊಡನೆ ಸ್ಮರಿಸಬೇಕು. ಕರ್ಮಕ್ಕೆ ಪ್ರಾಧಾನ್ಯ ಕೊಟ್ಟಿದೆ ಮಾತ್ರವಲ್ಲ, ಕರ್ಮ ಫಲದಲ್ಲಿ ಆಸಕ್ತಿ ಬೇಡ ಎಂದೂ ಹೇಳಿದೆ, ಗೀತೆ. ಎರಡು ವಿಚಾರ ಗಳು ಒಟ್ಟೊಟ್ಟಿಗೇ ಹೋಗುತ್ತವೆ ಎಂಬುದು ಗಮನಾರ್ಹ.

ಇದು ಪ್ರಸಿದ್ಧವಾದ ಗೀತಾಶ್ಲೋಕ:

''**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ......**''

'ನಿನಗೆ ಯಾವಾಗಲೂ ಕರ್ಮದಲ್ಲಿ ಅಧಿಕಾರವೆ ಹೊರತು, ಫಲದಲ್ಲಿ ಆಸಕ್ತಿಯಿಲ್ಲದಿರಲಿ.'

ಅಧಿಕಾರಕ್ಕೆ ಇಲ್ಲಿ ಕರ್ತವ್ಯ ಎಂದು ಅರ್ಥೈಸಬೇಕು. ಕರ್ಮ ಎಲ್ಲರ ಅನಿವಾರ್ಯ ಕರ್ತವ್ಯ.

ಇನ್ನು, ಅನಾಸಕ್ತಿಯ ಪ್ರಸಕ್ತಿ ಅನೇಕ ಕಡೆ ಬಂದಿದೆ. ''ಆಸಕ್ತಿ ಯಿಂದ ಮುಕ್ತನಾಗಿ ಕರ್ಮವನ್ನು ಸರಿಯಾಗಿ ಮಾಡು''; ''ಅಸಕ್ತನಾಗಿ ಯಾವಾಗಲೂ ಅವಶ್ಯಕವಾದ ಕರ್ಮವನ್ನು ಆಚ ರಿಸು'' ಯೋಗಿಗಳು ಫಲದಲ್ಲಿ ಆಸಕ್ತಿಯನ್ನು ಬಿಟ್ಟು... ಕರ್ಮ ವನ್ನು ಮಾಡುತ್ತಾರೆ.

''ಯೋಗ'' ಎನ್ನುವುದೇನು? ಅದೇನೂ ಅತಿರೇಕಕ್ಕೆ ಸೀಮಿತ ವಲ್ಲ. ''ಯೋಗಃ ಕರ್ಮಸು ಕೌಶಲಂ.'' (ಕರ್ಮಗಳಲ್ಲಿನ ಕುಶ ಲತೆಯೇ ಯೋಗ ಎನ್ನುತ್ತದೆ, ಗೀತೆ. ಹಾಗೆಯೇ, ''ಸಮತ್ವಂ ಯೋಗಮುಚ್ಯತೇ.''(ಸಮತೆಯೇ ಯೋಗ)

'ಅಭ್ಯಾಸಯೋಗ'ವೆಂಬ ಉಕ್ತಿಯೂ ಗೀತೆಯಲ್ಲಿ ಬರು ತ್ತದೆ. ಹಾಗೆಂದರೇನು? ''ಚಿತ್ತವನ್ನು ಎಲ್ಲಾ ಕಡೆಯಿಂದಲೂ ಸೆಳದುಕೊಂಡು ಒಂದೇ ಆಲಂಬನದಲ್ಲಿ ನಿಲ್ಲಿಸುವುದು ಅಭ್ಯಾಸ; ಅದರ ಸಹಿತ ಮನಸ್ಸನ್ನು ಸಮಾಧಾನಗೊಳಿಸುವ ಲಕ್ಷಣವುಳ್ಳದ್ದು ಯೋಗ.'' ಸತತಾಭ್ಯಾಸ ಎಲ್ಲ ಸಾಧನೆಗಳಿಗೂ ಆವಶ್ಯಕ. ಮನ ಸ್ಸನ್ನು ಅಭ್ಯಾಸದಿಂದ ಬಿಗಿಹಿಡಿಯಬೇಕು. ''ಮನಸ್ಸು ದುರ್ನಿ ಗ್ರಹವಾದುದ್ದು, ಮತ್ತು ಚಂಚಲವಾದದ್ದು ಎಂಬುದು ನಿಸ್ಸಂ ಶಯ. ಅಭ್ಯಾಸದಿಂದಲೂ ವೈರಾಗ್ಯದಿಂಲೂ ಇದನ್ನು ನಿಗ್ರಹಿಸ ಬಹುದು'' ಎನ್ನುತ್ತಾನೆ ಗೀತಾಚಾರ್ಯ.

ದ್ವಂದ್ವಗಳನ್ನು ದಾಟಿದ ಸಮಚಿತ್ತತೆಗೆ ಗೀತೆ ಅನೇಕ ಕಡೆ ಪ್ರಾಶಸ್ತ್ಯ ಕೊಟ್ಟಿದೆ. ಯಾವುದೋ ಪ್ರಮಾಣದಲ್ಲಿ ಎಲ್ಲರೂ 'ಸ್ಥಿತ ಪ್ರಜ್ಞೆ'ಯನ್ನು ಸಾಧಿಸಬೇಕು. ಇಲ್ಲವಾದರೆ, ಬದುಕಿನಲ್ಲಿ ಸುಖ ಶಾಂತಿಗಳಿರುವುದಿಲ್ಲ.

ಸಮತ್ವ ಸಂಬಂಧವಾದ ಕೆಲವು ಉಕ್ತಿಗಳು: ''**ಸಮದುಃಖ ಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ**'' (ಸುಖದುಃಖ ಗಳಲ್ಲಿ ಸಮಾನವೆಂದು ಭಾವಿಸುವ ಜ್ಞಾನಿಯು ಅಮೃತತ್ವಕ್ಕೆ ಯೋಗ್ಯನಾಗುವವನು). ಸಮದುಃಖ, ಸುಖ ಎಂಬ ಮಾತು ಇನ್ನು ಒಂದೆರಡು ಕಡೆ ಬರುತ್ತದೆ.

**ದುಃಖೇಷ್ವನುದ್ವಿಗ್ನ ಮನಾಃ ಸುಖೇಷು ವಿಗತಸ್ಪೃಹಃ ।**
**ವೀತರಾಗಭಯ ಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥**

('ದುಃಖಗಳಲ್ಲಿ ಉದ್ವೇಗವಿಲ್ಲದ ಮನಸ್ಸುಳ್ಳವನು ಸುಖ ಗಳಲ್ಲಿ ಆಸೆಯಿಲ್ಲದವನೂ ಆದ ಮುನಿ ಸ್ಥಿತಪ್ರಜ್ಞ...') ಸ್ಥಿತಪ್ರಜ್ಞ ಮುನಿಗಳದೇ ಹಕ್ಕಲ್ಲ; ಮನಮನಕ್ಕೂ ಮನೆಮನೆಗೂ ಅದು ಬೇಕು.

ಗೀತೆಯಲ್ಲಿ ಬರುವ ಒಂದು ಮುಖ್ಯ ಪರಿಕಲ್ಪನೆಯೆಂದರೆ, 'ಸ್ವಧರ್ಮ'. ಅದಕ್ಕೆ ಇಲ್ಲಿ ವಿವರಣೆಯಿಲ್ಲ. ಆದ್ದರಿಂದಲೇ ಅದು ವಿವಾದಾಸ್ಪದವಾಗಿ ಪರಿಣಮಿಸಿದೆ. '**ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ**' ಎಂಬುದು ಪ್ರಸಿದ್ಧೋಕ್ತಿ; ಇನ್ನು ಒಂದು ಕಡೆ ಅದು ''ಶ್ರೇಯಾನ್ ಸ್ವಧರ್ಮೋ'' ಎಂದು ಪುನರುಕ್ತವಾಗಿದೆ. 'ಸ್ವಧರ್ಮ' ಎಂದರೆ ಸ್ವಜಾತಿ ಎಂಬರ್ಥದಲ್ಲಿ ಕೆಲವರು ವ್ಯಾಖ್ಯಾನಿಸಿರುವುದು ಶುದ್ಧ ತಪ್ಪು. ಸ್ವಧರ್ಮವೆಂದರೆ ಸ್ವಭಾವ, ಸಹಜ ಪ್ರವೃತ್ತಿ, ಮನೋಧರ್ಮ. ಕೆಲವೊಮ್ಮೆ ಸ್ವಧರ್ಮ ಅಥವಾ ಪ್ರವೃತ್ತಿಗೂ ವೃತ್ತಿಗೂ ಸಂಬಂಧವಿರಬಹುದು; ಆದರೆ

---

೧ ಮೊದಲನೆಯ ಅಧ್ಯಾಯವನ್ನು ಬಿಟ್ಟರೆ, ಆಮೇಲೆ ಯುದ್ಧದ ವಿಷ ಯವೇ ಬರುವುದಿಲ್ಲ ಎನ್ನುತ್ತಾರೆ, ಸ್ವಾಮಿ ರಂಗನಾಥಾನಂದರು. *('ಭಗವದ್ಗೀತೆಯ ವಿಶ್ವಸಂದೇಶ', ಸಂ.೧)*

ಹುಟ್ಟಿನಿಂದ ಸಿದ್ಧವಾದ ಜಾತಿಯ ಪ್ರಸಕ್ತಿ ಅದರಲ್ಲಿಲ್ಲ. ಯಾವುದರಲ್ಲಿ ನಮಗೆ ಸ್ವಾಭಾವಿಕ ಆಸಕ್ತಿಯುಂಟೋ ಅಭಿರುಚಿಯುಂಟೋ ಅದನ್ನು ನಾವು ಮಾಡಬೇಕು; ಅದರಿಂದ ಆತ್ಮವೃದ್ಧಿ. ಬೇರೆಯವರು ಮಾಡುವುದನ್ನು ಅನುಸರಿಸಿದರೆ, ತೊಂದರೆಯೇ.

''ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ'' (ಎಲ್ಲ ಧರ್ಮಗಳನ್ನೂ ಬಿಟ್ಟು ನನ್ನೊಬ್ಬನನ್ನೇ ಶರಣು ಬಾ) ಎಂಬ ಹೇಳಿಕೆಯನ್ನು ಇಲ್ಲಿಯೇ ನೋಡಬೇಕು. 'ಧರ್ಮಗಳನ್ನು' ಎನ್ನುವಲ್ಲಿ, ಬಹುವಚನಕ್ಕೆ ಏನರ್ಥ? ಧರ್ಮ ಎನ್ನುವುದು ಒಂದಲ್ಲವೆ? ಈ ಕಾಲಕ್ಕೆ ತಕ್ಕಂತೆ, ಹೀಗೆ ವಿವರಿಸಬಹುದೇನೋ. (ಸಾಂಪ್ರದಾಯಿಕ ವ್ಯಾಖ್ಯಾನಗಳು ಅತೃಪ್ತಿಕರ) ಇಂದು ಧರ್ಮವೆನ್ನುವುದು ಮತವಾಗಿ ಅವನತಿಗೊಂಡಿದೆ. ಎಂದರೆ ಅನೇಕ ಮತಗಳು ಏರ್ಪಟ್ಟಿವೆ. ಅವುಗಳಿಂದ ಪ್ರಯೋಜನವಿಲ್ಲ ಮಾತ್ರವಲ್ಲ, ಹಾನಿಯೇ. ಆದ್ದರಿಂದ ಮತಗಳೆಲ್ಲ ತ್ಯಾಜ್ಯ ; ಅಧ್ಯಾತ್ಮವೊಂದೆ ಶರಣ್ಯ ; ಭಗವಂತನೊಬ್ಬನೆ ಆಶ್ರಯ.

ಆಧುನಿಕ ಕಾಲ ಅಪನಂಬಿಕೆಯ ಕಾಲ; 'ಸಿನಿಕತನ'ದ ಕಾಲ; ಮನುಷ್ಯನಿಗೆ ಯಾವುದರಲ್ಲೂ ನಂಬಿಕೆಯಿಲ್ಲ; ಸಂಶಯವೇ ಸಾರ್ವತ್ರಿಕ. ಗೀತೆಯಾದರೋ ಶ್ರದ್ಧೆಯನ್ನು ಬೋಧಿಸುತ್ತದೆ. ಸಂಶಯವನ್ನು ನಿರಸನಗೊಳಿಸಬಯಸುತ್ತದೆ. ''ಸಂಶಯಾತ್ಮಾ ವಿನಶ್ಯತಿ''(ಸಂಶಯಾತ್ಮ ಹಾಳಾಗುತ್ತಾನೆ. ಎಂಬುದು ಅದರ ದೃಢವಾಣಿ. ಶ್ರದ್ಧೆಯೆಂದರೆ ಅಂಧ ಶ್ರದ್ಧೆಯಲ್ಲ; ವೈಚಾರಿಕವಾದ ನಂಬುಗೆ.

ಜ್ಞಾನದ ಮಹತ್ವವನ್ನು ಎತ್ತಿಹಿಡಿಯುತ್ತದೆ ಗೀತೆ: '' ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ'' (ಜ್ಞಾನದಷ್ಟು ಪವಿತ್ರವಾದುದು ಇಲ್ಲಿ ಮತ್ತಾವುದೂ ಇಲ್ಲ) ಜ್ಞಾನವೆ ತಪಸ್ಸು. ಆಧುನಿಕ ಯುಗದ ದೃಷ್ಟಿಯಿಂದಲೂ ಇದು ಸತ್ಯಸ್ಯ ಸತ್ಯ. ವಿದ್ಯೆ, ಜ್ಞಾನಗಳನ್ನು ತಂದುಕೊಡುವ ಶಿಕ್ಷಣವು ಅನ್ನ, ವಸ್ತ್ರ, ವಸತಿಗಳಿಗಿಂತ ಮುಖ್ಯ.

ಗೀತೆ ಪಂಡಿತರ ವ್ಯಾಜದಲ್ಲಿ ಸಮದರ್ಶನವನ್ನು ಬೋಧಿಸುತ್ತದೆ. ಇದೊಂದು ಮಹತ್ವಪೂರ್ಣ ಶ್ಲೋಕ:

**ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।**
**ಶುನಿ ಚೈವ ಶ್ವಪಾಕೇ ಚ ಪಂಡಿತಾ ಸಮದರ್ಶಿನಃ ॥**

('ವಿದ್ಯಾವಿನಯಗಳಿಂದ ಕೂಡಿದವನು, ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ಚಂಡಾಲ — ಇವರೆಲ್ಲರಲ್ಲಿಯೂ ಜ್ಞಾನಿಗಳು ಸಮದರ್ಶಿಗಳಾಗಿರುವರು.')

**''ಗೀತೆಯ ಗುರಿ ಬ್ರಹ್ಮವಿದ್ಯೆ, ನೀತಿವಿದ್ಯೆಯಲ್ಲ''** ಎಂಬ ಹೇಳಿಕೆಯೊಂದಿದೆ. ಅದು ಪಾರ್ಶ್ವಿಕವಾಗಿ ಮಾತ್ರ ಸತ್ಯ. ಗೀತೆ ಇಂದ್ರಿಯನಿಗ್ರಹಕ್ಕೆ, ಇಲ್ಲವೆ ಸಂಯಮಕ್ಕೆ ಕರೆಕೊಡುತ್ತದೆ; ಸಾಮಾನ್ಯರಿಗೆ ನೀತ್ಯುಪದೇಶ ಮಾಡುತ್ತದೆ. ಅದು ಆಧ್ಯಾತ್ಮಗಾಥೆಯೂ ಹೌದು, ನೀತಿಸಂಹಿತೆಯೂ ಹೌದು.

ಇಂದ್ರಿಯಗಳ ಪ್ರಾಬಲ್ಯವನ್ನು ಹೀಗೆ ಹೇಳಲಾಗಿದೆ: ''ವಿಕ್ಷೇಪವನ್ನುಂಟುಮಾಡುವ ಇಂದ್ರಿಯಗಳು ಪ್ರಯತ್ನಶೀಲನೂ ಜ್ಞಾನಿಯೂ ಆದ ಪುರುಷನ ಮನಸ್ಸನ್ನು ಕೂಡ ಬಲಾತ್ಕಾರದಿಂದ ಹರಣಮಾಡುವುವು.) ಆದ್ದರಿಂದ ''ಇಂದ್ರಿಯಗಳನ್ನೆಲ್ಲ ನಿಗ್ರಹಿಸಿ... ಸಮಾಹಿತಚಿತ್ತನಾಗಬೇಕು.'' ಇದು ಗೀತೆಯ ನಿರ್ಣಯ: ''ಇಂದ್ರಿಯಾರಾಮದ ಬದುಕು ವಿಫಲ.''

**''ನ ಶಾಂತಿಮಾಪ್ನೋತಿ ಸ ಕಾಮಕಾಮೀ''** (ಕಾಮಕಾಮಿಗೆ ಶಾಂತಿಯಿಲ್ಲ) ಎನ್ನುವ ಗೀತೆ, ''ಅಶಾಂತಸ್ಯ ಕುತಃ ಸುಖಂ?'' (ಅಶಾಂತನಿಗೆ ಸುಖವೆಲ್ಲಿಯದು) ಎಂದು ಕೇಳುತ್ತದೆ; 'ಅಹಂಕಾರ ಮಮಕಾರವಿಲ್ಲದವನು ಶಾಂತಿಯನ್ನು ಪಡೆಯುತ್ತಾನೆ'' ಎಂದು ಉತ್ತರವನ್ನು ಹೇಳುತ್ತದೆ.

ತನಗೆ ಯಾರು ಪ್ರಿಯ ಎಂದು ಹೇಳುವಾಗ, ಕೃಷ್ಣ ಅನೇಕ ಗುಣಗಳ ಪಟ್ಟಿಯೊಂದನ್ನು ಕೊಡುತ್ತಾನೆ: ''ಯಾವ ಪ್ರಾಣಿಯನ್ನೂ ದ್ವೇಷಿಸದವನು, ಮಿತ್ರಭಾವದಿಂದ ಕೂಡಿದವನು, ಕರುಣೆಯುಳ್ಳವನು, ಮಮಕಾರ ಅಹಂಕಾರಗಳಿಲ್ಲದವನು, ಸುಖದುಃಖಗಳಲ್ಲಿ ಸಮನಾಗಿರುವವನು, ಕ್ಷಮಾಶೀಲನು... ಹೀಗೆಯೇ, ಮತ್ತೊಂದು ಪಟ್ಟಿ: ''ಅಲ್ಪಲಾಭಸಂತುಷ್ಟ, ಅನಿಕೇತ, ಸ್ಥಿರಮತಿ, ಭಕ್ತಿಯುತ. ದೈವೀ ಸಂಪದ, ಆಸುರೀ ಸಂಪದ ಎಂಬ ಎರಡು 'ಸಂಪದ'ಗಳನ್ನು ಹೇಳುತ್ತದೆ ಗೀತೆ. 'ದೈವೀ ಸಂಪದ'ವನ್ನು ರೂಪಿಸುವ ಗುಣಗಳಲ್ಲಿ ಇವು ಕೆಲವು: ಅಭಯ, ಸತ್ತ್ವಸಂಶುದ್ಧಿ, ದಾನ, ದಮ, ತಪಸ್ಸು, ಸರಳತೆ, ಅಹಿಂಸೆ, ಸತ್ಯ, ಅಕ್ರೋಧ, ತ್ಯಾಗ, ಶಾಂತಿ, ಚಾಡಿ ಹೇಳುವಿಕೆ, ಭೂತದಯೆ, ಅಲೋಲುಪತೆ, ಮೃದುಸ್ವಭಾವ, ನಾಚಿಕೆ, ಅಚಾಪಲ, ತೇಜಸ್ಸು, ಕ್ಷಮೆ, ಧೈರ್ಯ, ಶೌಚ, ಅದ್ರೋಹ ಅನಭಿಮಾನ.

ಸುಖವನ್ನು, ಸಾತ್ವಿಕ, ರಾಜಸ, ತಾಮಸ ಎಂದು ವರ್ಗೀಕರಿಸುತ್ತದೆ, ಗೀತೆ. ''ಯಾವ ಸುಖವು ಮೊದಲು ವಿಷದಂತೆಯೂ ಕೊನೆಯಲ್ಲಿ ಅಮೃತ ಸದೃಶವಾಗಿಯೂ ಇರುವುದೋ.. ಆ ಸುಖವು ಸಾತ್ವಿಕ. ಯಾವ ಸುಖವು ಮೊದಲು ಅಮೃತ ಸದೃಶವಾಗಿಯೂ ಕೊನೆಯಲ್ಲಿ ವಿಷದಂತೆಯೂ ಇರುವುದೋ ಆ ಸುಖವು ರಾಜಸಿಕ.''

ಶಾರೀರ, ವಾಙ್ಮಯ, ಮಾನಸ ಎಂದು ಮೂರು ಬಗೆಯ ತಪಸ್ಸು ಗೀತೆಯಲ್ಲಿ ಉಕ್ತವಾಗಿದೆ. ಇವು ಕಾಯಿಕ ತಪಸ್ಸು: ದೇವ ದ್ವಿಜ ಗುರು ಪ್ರಾಜ್ಞ ಪೂಜನ, ಶೌಚ ಆರ್ಜವ, ಬ್ರಹ್ಮಚರ್ಯ, ಅಹಿಂಸೆ; ಇವು ವಾಚಿಕ ತಪಸ್ಸು: ಅನುದ್ವೇಗಕರವಾದ ಮಾತು, ಸತ್ಯವೂ, ಪ್ರಿಯವೂ ಹಿತವೂ ಆದ ಮಾತು, ಸ್ವಾಧ್ಯಾಯದ ಅಭ್ಯಸನ; ಇವು ಮಾನಸ ತಪಸ್ಸು: ಮನಃಪ್ರಸಾದ, ಸೌಮ್ಯತೆ, ಮೌನ, ಮನೋನಿಗ್ರಹ, ಭಾವ ಸಂಶುದ್ಧಿ. ತಪಸ್ಸು ಎನ್ನುವುದು ಕಾಡಿನಲ್ಲಿ ಕುಳಿತು ಕೆಲವರು ಮಾಡುವಂಥದಲ್ಲ.

ವ್ಯಕ್ತಿ ''ಸರ್ವಭೂತ ಹಿತೇರತ''(ಎಲ್ಲ ಪ್ರಾಣಿಗಳ ಹಿತದಲ್ಲಿ ಆಸಕ್ತ)ನಾಗಿರಬೇಕು, ''ಲೋಕ ಸಂಗ್ರಹ'ದಲ್ಲಿ ತೊಡಗಬೇಕು

ಎಂದು ವಿಧಿಸುತ್ತದೆ, ಗೀತೆ. ಲೋಕಸಂಗ್ರಹವೆಂದರೆ, ''ಸಮಾಜ ವನ್ನು ದುರ್ಮಾಗದಿಂದ ಬಿಡಿಸಿ, ಸನ್ಮಾರ್ಗದಲ್ಲಿ ನಡೆಸು ವುದು.'' ''ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ'' (ಒಳಿತು ಮಾಡುವವನಿಗೆ ದುರ್ಗತಿಯಿಲ್ಲ) ಎಂದು ಭರವಸೆ ಕೊಡುತ್ತದೆ ಗೀತೆ. ''ನನ್ನ ಭಕ್ತನಿಗೆ ನಾಶವಿಲ್ಲ'' ಎಂದು ಅಭಯ ಕೊಡುವ ಹರಿ ಹೀಗೆ ಭರವಸೆಯ ಹರೆಯನ್ನು ಮೊಳಗಿಸುತ್ತಾನೆ: ''ಅನನ್ಯವಾಗಿ ನನ್ನನ್ನು ಧ್ಯಾನಿಸುತ್ತಿರುವ ಯಾವ ಜನರು ಉಪಾ ಸನೆ ಮಾಡುತ್ತಾರೆಯೋ ಅಂತಹ ನಿತ್ಯಮುಕ್ತರ ಯೋಗಕ್ಷೇಮ ವನ್ನು ನಾನು ವಹಿಸಿಕೊಳ್ಳುತ್ತೇನೆ.'' ('**ಯೋಗಕ್ಷೇಮಂ ವಹಾಮ್ಯಹಂ**')

ಭಗವದ್ಗೀತೆ ಹೀಗೆ ಮನುಷ್ಯನನ್ನು ದೈವದ ಕೈಗೊಪ್ಪಿಸಿ, ಸುಮ್ಮ ನಾಗುವುದಿಲ್ಲ; ಪುರುಷಕಾರವನ್ನು ಪುರಸ್ಕರಿಸುತ್ತದೆ ಎಂಬುದು ಮುಖ್ಯ. ಈ ಮಾತನ್ನು ಅವಶ್ಯವಾಗಿ ಲಕ್ಷಿಸಲೇಬೇಕು: ''**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್**'' (ವ್ಯಕ್ತಿ ತನ್ನನ್ನು ತನ್ನಿಂದ, ಉದ್ಧರಿಸಿಕೊಳ್ಳಬೇಕು; ತನ್ನನ್ನು ಕುಗ್ಗಿಸಿಕೊಳ್ಳಬಾರದು) ಆತ್ಮಾರ್ಪಣಕ್ಕೆ ಮಾತ್ರವಲ್ಲ, ಆತ್ಮಪ್ರತ್ಯಯಕ್ಕೂ ಗೀತೆ ಪ್ರಾಶಸ್ತ್ಯ ವಿತ್ತಿದೆ. ಭಕ್ತಿ ಎಂದರೆ ದೈನ್ಯವಲ್ಲ.

ತ್ಯಾಗವಷ್ಟೇ, ನಿವೃತ್ತಿಯಷ್ಟೆ ಗೀತೆಯ ಸಂದೇಶವಲ್ಲ; ಪ್ರವೃತ್ತಿಗೂ ಅದು ಒತ್ತು ಕೊಟ್ಟಿದೆ. ಶ್ರೇಯಸ್ಸಿಗೆ ಪ್ರಾಶಸ್ತ್ಯವಿತ್ತರೂ ಶ್ರೇಯಸ್ಸನ್ನು ಪೂರ್ತಿ ನಿರಾಕರಿಸುವುದಿಲ್ಲ. ಒಟ್ಟಿನಲ್ಲಿ ಅದರ ನಿಲುವು ಸಮನ್ವಯನಿಷ್ಠ.

''ಯೋಗಶಾಸ್ತ್ರ'ವೆನಿಸಿದೆ, ಗೀತೆ. ಅದರ ಒಂದೊಂದು ಅಧ್ಯಾಯಕ್ಕೂ ಒಂದೊಂದು ಯೋಗದ ಹೆಸರು ಕೊಡಲಾಗಿದೆ. ಆದರೆ ಅದು ಶ್ರೀಸಾಮಾನ್ಯನಿಗೆ ನಿಲುಕದ ಯೋಗವಲ್ಲ!

ಭಗವದ್ಗೀತೆ ಶ್ರೇಷ್ಠ ಜೀವನವನ್ನು ಕಟ್ಟಿಕೊಡುತ್ತದೆ ಮಾತ್ರವಲ್ಲ, ಸ್ವತಃ ಶ್ರೇಷ್ಠತಮ 'ಕಟ್ಟಡ'ವಾಗಿದೆ.

## ಗೀತೆ ಶಾಸ್ತ್ರಗಳ ಸಾರ

**ಭಕ್ತ: ''ಗೀತೆ ಭಗವಂತನ ಮಾತುಗಳನ್ನು ಒಳಗೊಂಡಿದೆ.''**

**ಶ್ರೀರಾಮಕೃಷ್ಣರು: ''ಗೀತೆ ಎಲ್ಲಾ ಶಾಸ್ತ್ರಗಳ ಸಾರ. ಸಂನ್ಯಾಸಿಯ ಹತ್ತಿರ ಇನ್ನು ಬೇರೆ ಯಾವ ಪುಸ್ತಕವಿಲ್ಲದಿದ್ದರೂ, ಗೀತೆಯ ಪುಟ್ಟ ಪ್ರತಿಯೊಂದಾದರೂ ಇದ್ದೇ ಇರುತ್ತದೆ.**

*(ಶ್ರೀರಾಮಕೃಷ್ಣ ವಚನವೇದ, ಭಾಗ ೨, ಪು.೩೨೪)*


With Best Compliments From

NANDU
CHEMICAL INDUSTRIES

N-12, INDUSTRIAL ESTATE, GOKUL ROAD
HUBLI - 580 030 (KARNATAKA)



Manufacturers & Exporter of Active Pharmaceuticals Ingredients
Winner of Export Excellence Award 2011